**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1184/2014

| | |
|---|---|
| ಸಾಕ್ಷಿದಾರರ ಹೆಸರು | ರವಿ |
| ತಂದೆಯ ಹೆಸರು | ಲೇಟ್ ಕೆಂಪಯ್ಯ |
| ವಯಸ್ಸು | 45 ವರ್ಷ |
| ವೃತ್ತಿ | ಉಪವಲಯ ಅರಣ್ಯಾಧಿಕಾರಿ, ಬಂಡೀಪುರ |
| ವಿಳಾಸ | ಚಾಮರಾಜನಗರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 25.11.2025 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ನಾನು 2014 ರಿಂದ 2016 ರವರೆಗೂ ನಾನು ದೊಡ್ಡಆಲಹಳ್ಳಿ ಶಾಖೆಯಲ್ಲಿ ಉಪವಲಯ ಅರಣ್ಯಾಧಿಕಾರಿಯಾಗಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ನಾನು ಪ್ರಕರಣದಲ್ಲಿ 1ನೇ ಆರೋಪಿಯನ್ನು ಮಾತ್ರ ನೋಡಿರುತ್ತೇನೆ. ಆತನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1ನೇ ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಗುರುತಿಸಲು ತಕರಾರು ಇಲ್ಲ ಎಂದು ಹೇಳಿರುತ್ತಾರೆ. ಚಾಸಾ-1, ಚಾಸಾ-3 ರಿಂದ 11ರವರು ಗೊತ್ತಿರುತ್ತಾರೆ.

ದಿಃ22.09.2014 ರಂದು ಮುಗ್ಗೂರು ಶಾಖೆಯ ಚಾವರಕಲ್ಲು ವ್ಯಾಪ್ತಿಯ ಬಾಲದಾನೆ ಅರಣ್ಯ ಪ್ರದೇಶದಲ್ಲಿ ಖಚಿತ ವರ್ತಮಾನ ಬಂದ ಮೇರೆಗೆ ಸಿಬ್ಬಂದಿಗಳ ಜೊತೆಗೆ ಹೋಗಿ ನೋಡಲಾಗಿ ಯಾರೋ ಅಸಾಮಿಗಳು ಟರ್ಚ್ ಬೆಳಕಿನ ಸಹಾಯದಿಂದ ಬೇಟೆಯಾಡುತ್ತಿರುವುದು ಕಂಡು ಬಂದಿರುತ್ತದೆ. ಆಗ ರಾತ್ರಿ

12 ರಿಂದ 1 ಗಂಟೆಯಾಗಿತ್ತು. ನಂತರ ಸದರಿಯವರ ಚಲನವಲನಗಳನ್ನು ನೋಡಲು ನಾವು ಅಲ್ಲಿರುವ ಪೊದೆಗಳಲ್ಲಿ ಅವಿತು ಕುಳಿತುಕೊಂಡಿದ್ದು ಸದರಿಯವರು ಹತ್ತಿರ ಬಂದಾಗ ನಾವು ಹಿಡಿಯಲು ಪ್ರಯತ್ನ ಮಾಡಿದಾಗ ಕೇವಲ ಒಬ್ಬ ಅಸಾಮಿ ಸಿಕ್ಕಿರುತ್ತಾರೆ. ಉಳಿದವರು ಕಾಡಿನಲ್ಲಿ ಪರಾರಿಯಾಗಿರುತ್ತಾರೆ.

ಸದರಿ ಅಸಾಮಿಯನ್ನು ನಾವು ಪರೀಶೀಲನೆ ಮಾಡಿ ನೋಡಿದಾಗ ಆತನ ಬಳಿ ಒಂಟಿ ನಳಿಕೆಯ ನಾಡಬಂದೂಕು, ಸಣ್ಣದೊಂದು ಮದ್ದಿನ ಚೀಲ ಇವುಗಳು ಕಂಡು ಬಂದಿರುತ್ತದೆ. ಸದರಿ ಅಸಾಮಿಯನ್ನು ವಿಚಾರಣೆ ಮಾಡಲಾಗಿ ಆತನ ಹೆಸರು ರಾಜು ಬಿನ್ ಬಸವಯ್ಯ ಎಂಬುದಾಗಿ 30 ವರ್ಷ ಮಳ್ಳಿಪುರ ದವರು ಎಂದು ತಿಳಿಸಿರುತ್ತಾರೆ. ನಂತರ ಸದರಿ ಅಸಾಮಿಯನ್ನು ವಿಚಾರಿಸಿದಾಗ ಅವರು ಒಟ್ಟಿಗೆ 5 ಜನರು ಬಂದಿರುವುದಾಗಿ ಹಾಗೂ 3 ನಾಡ ಬಂದೂಕುಗಳನ್ನು ತೆಗೆದುಕೊಂಡು ಬಂದಿದ್ದರು ಎಂದು ಹಾಗೂ ಕಾಡಿನಲ್ಲಿ ಬೇಟೆಯಾಡಿ ಒಂದು ಕಾಡು ಕುರಿಯನ್ನು ಹೊಡೆದು ಅದನ್ನು ಮಾಂಸವನ್ನಾಗಿ ಪರಿವರ್ತನೆ ಮಾಡಿ ಅದರ ತಲೆ, ಕಾಲು ಹಾಗೂ ಚರ್ಮವನ್ನು ಹಾಗೂ ಒಂದು ಮುಳ್ಳುಹಂದಿಯನ್ನು ಸುಟ್ಟು ತರುತ್ತಿದ್ದರೆಂದು ನಮಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ಅವರು ನಮಗೆ ಸಿಕ್ಕಿ ಬಿದ್ದಿರುತ್ತಾರೆ.

ನಂತರ ಸದರಿ ಸ್ಥಳದ ಸುತ್ತಮುತ್ತಲು ನಮ್ಮ ಸಿಬ್ಬಂದಿಯವರು ಪರಿಶೀಲನೆ ಮಾಡಿ ನೋಡಲಾಗಿ 2 ಬಟ್ಟೆಯ ಚೀಲಗಳು ಕಂಡು ಬಂದಿದ್ದು ಒಂದರಲ್ಲಿ ಕಾಡು ಕುರಿಯ ಮಾಂಸ, ತಲೆ ಕಾಲು ಹಾಗೂ ಚರ್ಮ ಹಾಗೂ ಇನ್ನೊಂದರಲ್ಲಿ ಮುಳ್ಳುಹಂದಿಯ ಸುಟ್ಟ ಮೃತದೇಹ ಕಂಡು ಬಂದಿರುತ್ತದೆ ಹಾಗೂ ಎರಡು ನಾಡಬಂದೂಕುಗಳು ಸಹ ಸಿಕ್ಕಿದವು. ಅದರಲ್ಲಿ ಸುರಕ್ಷತೆಯ ದೃಷ್ಟಿಯಿಂದ fully loded ಬಂದೂಕುಗಳನ್ನು ನಮ್ಮ ಜೀಪಿನಲ್ಲಿ ಇರಿಸಲಾಯಿತು. ಸದರಿ ಸ್ಥಳದಲ್ಲಿ ನಾವು ಮೂರು ನಾಡಬಂದೂಕುಗಳು, ಮದ್ದಿನ ಚೀಲ, ಕಾಡು ಕುರಿಯ ಮಾಂಸ, ತಲೆ ಕಾಲುಗಳು ಹಾಗೂ ಚರ್ಮ, ಮುಳ್ಳುಹಂದಿಯ ಸುಟ್ಟ ಮೃತದೇಹ ಒಂದು ಚಾಕು, ಹಣೆಯ ಬ್ಯಾಟರಿ ಇವುಗಳನ್ನು ಅಮಾನತು ಪಡಿಸಿಕೊಂಡಿರುತ್ತೇವೆ. ಬೆಳಗಿನ ಜಾವ 3 ಗಂಟೆಯಿಂದ 4 ಗಂಟೆಯವರೆಗೂ ಸದರಿ ಮಹಜರ್ ಮಾಡಲಾಗಿರುತ್ತದೆ.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಮೂರು ಒಂಟಿ ನಳಿಕೆಯ ನಾಡ ಬಂದೂಕುಗಳನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮ-1 ರಿಂದ 3 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಒಂದು ಸಣ್ಣ ಮದ್ದಿನ ಚೀಲವನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮ-4 ಎಂದು ಹಾಗೂ ಅದರಲ್ಲಿದ್ದ 3 ಮದ್ದಿನ ಬಾಟಲ್ ಗಳನ್ನು ಹಾಗೂ ಒಂದು ಸಣ್ಣ ಚೀಲವನ್ನು ತೋರಿಸಲಾಗಿ ಸಾಕ್ಷಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮ-5 ರಿಂದ 8 ಎಂದು ಗುರುತಿಸಲಾಯಿತು.

ಅದೇ ರೀತಿ ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಒಂದು ಚಾಕುವನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮ-9 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಎರಡು ಬ್ಯಾಟರಿಗಳನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು.ಮ-10 ಮತ್ತು 11 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದಿರುವ ಒಂದು ಕಾಗಿ ಬಣ್ಣದ ದೊಡ್ಡ ಚೀಲವನ್ನು ತೋರಿಸಿದ್ದು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು.ಮ-12 ಎಂದು ಹಾಗೂ ಸದರಿ ಮು.ಮ-12 ರಲ್ಲಿದ್ದ ಒಂದು ಚಿಕ್ಕ ಬ್ಯಾಗ್ ನಲ್ಲಿರುವ ಸೀಸದ ಸಣ್ಣ ಗಾತ್ರದ ಬಾಲ್ ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಬ್ಯಾಗ್ ನ್ನು ಮು.ಮ-13 ಎಂದು ಗುರುತಿಸಲಾಯಿತು. ನಾನು ಈ ಸಂಬಂಧ ತನಿಖಾಧಿಕಾರಿಗೆ ಹೇಳಿಕೆ ಕೊಟ್ಟಿರುತ್ತೇನೆ.

**ಪಾಟೀ ಸವಾಲು: 2 ರಿಂದ 5ನೇ ಆರೋಪಿತರ ಪರ ವಕೀಲರಿಂದ**

ಈ ದಿನ ನ್ಯಾಯಾಲಯದಲ್ಲಿರುವ 2 ರಿಂದ 5ನೇ ಆರೋಪಿತರನ್ನು ನಾನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆಂದರೆ ಸರಿ. ಸದರಿಯವರುಗಳು ಯಾವ ಊರಿನವರು ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. ನಾನು ವರ್ತಮಾನ ಬಂದಾಗ ದೊಡ್ಡಆಲಹಳ್ಳಿಯಲ್ಲಿ ಬೆಂಡಗೋಡು ಚೆಕ್ ಪೋಸ್ಟ ಬಳಿ ಇದ್ದೇನು. ಆ ಸಮಯದಲ್ಲಿ ಸದರಿ ಸ್ಥಳದಲ್ಲಿ ನಾನು ಒಬ್ಬನೇ ಇದ್ದೇನು. ನನ್ನ ಜೊತೆ ಅಲ್ಲಿ ಚೆಕ್ ಪೋಸ್ಟ ಸಿಬ್ಬಂದಿ ಇದ್ದರು. ಸದರಿಯವರ ಹೆಸರು ಸಿದ್ದರಾಜುನಾಯ್ಕ, ರಾಜುನಾಯ್ಕ, ಸುನೀಲ್ ಹಾಗೂ ಗಿರೀಶ್ ರವರು ಇದ್ದರು. ಸದರಿ ವಿಚಾರವನ್ನು ನನಗೆ ವಲಯಾಧಿಕಾರಿಗಳು ತಿಳಿಸಿರುತ್ತಾರೆ. ಸದರಿಯವರು ಸದರಿ ಘಟನಾ ನಡೆದ ಸ್ಥಳ ವ್ಯಾಪ್ತಿಯಲ್ಲಿದ್ದರು. ನನಗೂ ಅವರಿಗೂ ಸುಮಾರು 6 ರಿಂದ 7 ಕಿ.ಮೀಟರ್ ಅಂತರವಿತ್ತು. ಆ ಸಮಯದಲ್ಲಿ ನಮ್ಮ ಬಳಿ ಮೊಬೈಲ್ ಪೋನುಗಳು ಇದ್ದವು. ಚಾಸಾ-1 ರವರು ದೂರವಾಣಿಯ ಮುಖಾಂತರ ವಿಷಯ ತಿಳಿಸಿರುತ್ತಾರೆ. ನಾನು ಹೇಳಿಕೆ ಕೊಡುವಾಗ ಚಾಸಾ-1 ರವರು ನಮಗೆ ಪೋನ್ ಮುಖಾಂತರ ವಿಷಯ ತಿಳಿಸಿರುತ್ತಾರೆಂದು ನಮೂದಿಸಿರುವುದಿಲ್ಲ. ಆಗ ಸಮಯ ಸುಮಾರು 11 ರಿಂದ 12 ಗಂಟೆಯಾಗಿರಬಹುದು. ಆಗ ನಾನು ಚವರಕಲ್ಲು ರಸ್ತೆಯ ಬಳಿ ಹೋಗಿರುತ್ತೇನೆ. ನಮ್ಮ ಶಾಖೆಯಿಂದ ಸದರಿ ಸ್ಥಳಕ್ಕೆ ಚಾಸಾ-5 ರಿಂದ 7 ರವರು ಸ್ಥಳಕ್ಕೆ ಹೋಗಿರುತ್ತೇವೆ. ಸದರಿಯವರುಗಳು ಬೆಂಡಗೋಡು ಚೆಕ್ ಪೋಸ್ಟ ಬಳಿ ಇದ್ದರು. ಸದರಿಯವರುಗಳು ಅಲ್ಲಿ ಇರಲಿಲ್ಲ ಆದರೂ ಸಹಿತ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾವು ಸದರಿ ಸ್ಥಳಕ್ಕೆ ಹೋಗುವಷ್ಟರಲ್ಲಿ ಸುಮಾರು 1 ಗಂಟೆ ಕಾಲ ಹಿಡಿದಿತ್ತು. ಚಾಸಾ-1 ರವರು ನಾವು ಹೋಗುವವರೆಗೂ ಅಲ್ಲೇ ಆರೋಪಿಗಳ ಚಲನವಲನ ನೋಡುತ್ತಿದ್ದರು. ನಾವು ಹೋದಾಗ 1 ಗಂಟೆಯಾಗಿತ್ತು. ಸದರಿ ಕೃತ್ಯ ನಡೆದ ಪ್ರದೇಶ ಬಹಳ ದಟ್ಟವಾದ ಅರಣ್ಯ ಎಂದರೆ ಸರಿ. ಅಲ್ಲಿ ಸಾಮಾನ್ಯವಾಗಿ ಮನುಷ್ಯರು ಓಡಾಡಲು ಸಾಧ್ಯವಿಲ್ಲ ಎಂದರೆ ಸರಿ. ಕತ್ತಲಾದ ಕಾರಣ ಯಾವ ಪ್ರಾಣಿ

ಬರುತ್ತಿದೆ ಅಥವಾ ಮನುಷ್ಯ ಓಡಾಡುತ್ತಿದ್ದಾರೆಂದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿಯು ಇವರುಗಳು ಸದರಿ ವಸ್ತುಗಳನ್ನು ತೆಗೆದುಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ.

ಕಾಡಿನಲ್ಲಿ ಪ್ರತಿ ಅರವಿಗೂ ಗಿಡಮರಗಳು ಇವೆ ಎಂದರೆ ಸರಿ. ಆದ್ದರಿಂದ ಯಾವುದೇ ಮನುಷ್ಯ ಹತ್ತಿರಕ್ಕೆ ಬಂದರೆ ಮಾತ್ರ ಅವನ ಮುಖ ಪರಿಚಯವಾಗುತ್ತದೆಂದರೆ ಸರಿ. ನಾವು ಕಾಡಿನೊಳಗೆ ಪೊದೆಯೊಳಗೆ ಅವಿತು ಕುಳಿತಿದ್ದೇವು. ನಾವು ಅಸಾಮಿಗಳನ್ನು ನೋಡಿರುವುದಿಲ್ಲ ಬ್ಯಾಟರಿ ಲೈಟ್ ನ್ನು ನೋಡಿ ಹಿಂಬಾಲಿಸಿಕೊಂಡು ಹೋಗಿರುತ್ತೇವೆ. ಅಲ್ಲಿ ನಾನು ಹೇಳಿದ ರೀತಿಯಲ್ಲಿ ಬ್ಯಾಟರಿ ಹಿಡಿದುಕೊಂಡು ಯಾವುದೇ ಅಸಾಮಿಗಳು ಓಡಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬಂದೂಕುಗಳು ಬಾಲದಾನೆ ಅರಣ್ಯ ಪ್ರದೇಶದಲ್ಲೇ ಸಿಕ್ಕಿದವು. ಒಂದು ಬಂದೂಕು ರಾಜುವಿನ ಹತ್ತಿರ ಇತ್ತು. ಉಳಿದವು ಸ್ಥಳದಲ್ಲಿದ್ದು ಅವನ್ನು 1ನೇ ಆರೋಪಿ ಹೇಳಿದ ಮೇರೆಗೆ ಪರಿಶೀಲನೆ ಮಾಡಿ ತೆಗೆದುಕೊಂಡಿರುತ್ತೇವೆ. ನಾನು ಖುದ್ದಾಗಿ ಸದರಿ ಎರಡು ಬಂದೂಕುಗಳು ಯಾರಿಗೆ ಸೇರಿದ್ದವು ಎಂದು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ 2 ಬಂದೂಕುಗಳು ಆರೋಪಿಗೆ ಸಂಬಂದಿಚಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಹೇಳಿದಂತೆ ಸ್ಥಳದಲ್ಲಿ ಸದರಿ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಕೇವಲ 1 ನೇ ಆರೋಪಿ ನಮಗೆ ಹೇಳಿದ ಮೇರೆಗೆ ನಾವು 2 ರಿಂದ 5ನೇ ಆರೋಪಿಗಳು ಎಂದು ತಿಳಿದುಕೊಂಡಿದ್ದು ನಮಗೆ ಇದರ ಬಗ್ಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿ. 1ನೇ ಆರೋಪಿ ನಮಗೆ ಈ ರೀತಿ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಘಟನೆಗೂ ಈ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಆದರೂ ಸಹಿತ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಚಾಸಾ-5 ರವರು ನಿಪಿ-1 ನ್ನು ಬರೆದಿರುತ್ತಾರೆ. ಸದರಿ ನಿಪಿ-1 ನ್ನು ಚಾಸಾ-1 ರವರ ಕಚೇರಿಯಲ್ಲಿ ಬರೆಯಲಾಗಿದೆ ಎಂರದೆ ಸರಿಯಲ್ಲ. ಸದರಿ ಜಾಗ ಕತ್ತಲಾದ ಪ್ರದೇಶವಾದ್ದರಿಂದ ಅಲ್ಲಿ ನಿಪಿ-1 ನ್ನು ಬರೆಯಲು ಸಾಧ್ಯವಿಲ್ಲ ಎಂದರೆ ಟರ್ಚ್ ಬೆಳಕಿನ ಸಹಾಯದಿಂದ ಬರೆಯಲಾಗಿದೆ ಎಂದು ನುಡಿಯುತ್ತಾರೆ.

ಸದರಿ ಸ್ಥಳದ ಪೂರ್ವಕ್ಕೆ ಅಜ್ಜಿಮಡ, ಪಶ್ಚಿಮಕ್ಕೆ ವರ್ತಿಬಂಡೆ, ಉತ್ತರಕ್ಕೆ ಚಿಕ್ಕಾನೆ ಬೆಟ್ಟೆ ಮತ್ತು ದಕ್ಷಿಣಕ್ಕೆ ದೊಡ್ಡನೆ ಬೆಟ್ಟ ಇರುತ್ತದೆ. ಚಾಸಾ-5 ರವರು ಸ್ಥಳದಲ್ಲಿ ನಿಪಿ-1 ರಂತೆ ಯಾವುದೇ ಮಹಜರ್ ಬರೆದಿರುವುದಿಲ್ಲ ನಾನು ಯಾವುದೇ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಮಾನತು ಪಡಿಸಿಕೊಂಡ ವಸ್ತುಗಳ ಮೇಲೆ ನಮ್ಮಗಳ ಸಹಿ ಮಾಡಿರುವುದಿಲ್ಲ. ನಿಪಿ-1 ರಂತೆ ನಾನು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮ-1 ರಿಂದ 13 ಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(1ನೇ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಯಾವುದೇ ಸೂಕ್ತ ಕಾರಣವನ್ನು ಒದಗಿಸದೇ ಇರುವ ಸಂಬಂಧ ಮನವಿಯನ್ನು ತಿರಸ್ಕರಿಸಿ 1ನೇ ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**